Reg. No. : ....................................

Name : .......................................

**Code No. 9006**

**Second Year – March 2018**

Time : 2 ½ Hours
Cool-off time : 15 Minutes

Part – II

## KANNADA

Maximum : 80 Scores

***General Instructions to Candidates :***

- There is a 'Cool-off time' of 15 minutes in addition to the writing time.
- Use the 'Cool-off time' to get familiar with questions and to plan your answers.
- Read questions carefully before answering.
- Read the instructions carefully.
- Calculations, figures and graphs should be shown in the answer sheet itself.
- Give equations wherever necessary.
- Electronic devices except non-programmable calculators are not allowed in the Examination Hall.

ವಿದ್ಯಾರ್ಥಿಗಳಿಗೆ ಸೂಚನೆಗಳು :

- ಪರೀಕ್ಷೆ ಬರೆಯಲು ಬೇಕಾದ ಸಮಯಕ್ಕೆ ಹೊರತಾಗಿ **15** ನಿಮಿಷಗಳ 'ಕೂಲ್ ಆಫ್ ಸಮಯ' ವನ್ನು ಕೊಡಲಾಗಿದೆ.
- 'ಕೂಲ್ ಆಫ್ ಸಮಯ' ವನ್ನು ಪ್ರಶ್ನೆಗಳಿಗೆ ಸಂಬಂಧಿಸಿದ ನಿಮ್ಮ ಉತ್ತರಗಳ ಯೋಜನೆಗೆ ಬಳಸಿ.
- ಉತ್ತರಗಳನ್ನು ಬರೆಯುವುದಕ್ಕೆ ಮುಂಚಿತವಾಗಿ ಪ್ರಶ್ನೆಗಳನ್ನು ಗಮನವಿಟ್ಟು ಓದಿರಿ.
- ಸೂಚನೆಗಳನ್ನು ಗಮನವಿಟ್ಟು ಓದಿರಿ.
- ಎಣಿಕೆ/ಲೆಕ್ಕಾಚಾರಗಳನ್ನು , ಚಿತ್ರಗಳನ್ನು ಮತ್ತು ರೇಖಾನಕ್ಷೆಗಳನ್ನು ಉತ್ತರಪತ್ರಿಕೆಯಲ್ಲಿಯೇ ಬರೆಯಬೇಕು.
- ಅಗತ್ಯವಿರುವಲ್ಲಿ ಸಮೀಕರಣಗಳನ್ನು ಬರೆಯಿರಿ.
- 'ನಾನ್ ಪ್ರೋಗ್ರಾಮೇಬಲ್ ಕ್ಯಾಲ್ಕುಲೇಟರ್' ಗಳ ಹೊರತು ಬೇರೆ ಯಾವುದೇ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಕೊಠಡಿಯೊಳಗೆ ತರಬಾರದು.

(1 ರಿಂದ 4 ರವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ) **(4 × 1 = 4)**

1. ಶ್ರೀನಿವಾಸ – ಇದು ಯಾರ ಕಾವ್ಯನಾಮವಾಗಿದೆ ? (ಜಿ.ಎಸ್. ಶಿವರುದ್ರಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಅನಂತಮೂರ್ತಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ) **(Score : 1)**

2. ಅಪ್ಪನೂ ಒಲೆಯುರಿಯೂ – ಈ ಕವಿತೆಯನ್ನು ಯಾವ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ. (ಒಂದಿಷ್ಟು ಹಸಿಮಣ್ಣು, ಬಾಗಿಲಾಚೆಯ ಮೌನ, ಕಡಲಿಗೆಷ್ಟೊಂದು ಬಾಗಿಲು, ಹೇಮೆಯೊಡಲಲ್ಲಿ) **(Score : 1)**

3. 'ಆಗದು ಎಂದು' ಎಂಬುದು ಯಾವ ಚಲನಚಿತ್ರದ ಹಾಡಾಗಿದೆ ? (ಭಕ್ತ ಧ್ರುವ, ಬೂತಯ್ಯನ ಮಗ ಅಯ್ಯು, ಬಂಗಾರದ ಮನುಷ್ಯ, ಸತಿ ಸುಲೋಚನ) **(Score : 1)**

4. 'ಜಲರಾಶಿ' ಇದು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ. (ತತ್ಪುರುಷ, ದ್ವಂದ್ವ, ಕ್ರಿಯಾ, ಕರ್ಮಧಾರಯ) **(Score : 1)**

(5 ರಿಂದ 10 ರವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ) **(6 × 1 = 6)**

5. ಹೋಗು – ಈ ಪದದ ಯಾವುದಾದರೂ ಎರಡು ನಿಷೇದಾರ್ಥ ರೂಪಗಳನ್ನು ಬರೆಯಿರಿ. **(Score : 1)**

6. ಕತ್ತಲು – ಪದದ ಎರಡು ಪರ್ಯಾಯ ಪದಗಳನ್ನು ಬರೆಯಿರಿ. **(Score : 1)**

7. ಆಶ್ಚರ್ಯ, ಮುಖ – ಈ ಪದಗಳ ತದ್ಭವ ರೂಪವನ್ನು ಬರೆಯಿರಿ. **(Score : 1)**

8. ದಿಟ, ಠಕ್ಕು – ಈ ಪದಗಳ ಅರ್ಥವನ್ನು ತಿಳಿಸಿರಿ. **(Score : 1)**

9. ಭೂಮಿಗಳೆಡೆಯೊಳಿರ್ಪುದು – ವಿಂಗಡಿಸಿ ಬರೆಯಿರಿ. **(Score : 1)**

10. 'ಕರ್ನಾಟಕ ಸಂಗೀತ ಪಿತಾಮಹ' ಎಂದು ಪ್ರಸಿದ್ಧರಾದವರು ಯಾರು ? **(Score : 1)**

11. ಕಾಡು ಎಂಬ ಪದವನ್ನು ಕ್ರಿಯಾಪದವಾಗಿಯೂ, ನಾಮಪದವಾಗಿಯೂ ಬಳಸಿಕೊಂಡು ಒಂದೊಂದು ವಾಕ್ಯವನ್ನು ರಚಿಸಿರಿ. **(Scores : 2)**

12. ಕೆಳಗೆ ಕೊಟ್ಟಿರುವ ಮಿಶ್ರವಾಕ್ಯವನ್ನು ಸರಳವಾಕ್ಯಗಳಾಗಿ ಪರಿವರ್ತಿಸಿರಿ.
ಕಿವಿಯ ಗಲಾಟೆಯಿಂದ ಜಕಾನಾಗಳು ಗಾಬರಿಯಾಗಿ ಜೊಂಡಿನೊಳಗೆ ಅಡಗಿದ್ದು ಮೆಲ್ಲಗೆ ಧೈರ್ಯ ತೆಗೆದುಕೊಂಡು ಇಣುಕುತ್ತಿದ್ದುವು. **(Scores : 3)**

13. ಕೆಳಗೆ ಕೊಡಲಾದ ಪದ್ಯಸಾಲಿನ ಸಂದರ್ಭವನ್ನು ವಿವರಿಸಿರಿ.
ಆಳ್ ಮುಂದೆ ನಡೆದಲ್ಲದೆ ಅರಸು ನಡೆವನೆ **(Scores : 3)**

**(14 ರಿಂದ 18 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕನ್ನು ಉತ್ತರಿಸಿರಿ)** **(4 × 4 = 16)**

14. ಈ ಕೆಳಗೆ ನೀಡಲಾದ ಸರ್ವಜ್ಞನ ತ್ರಿಪದಿಗಳ ಸಾಲುಗಳಲ್ಲಿ ಪ್ರಕಟವಾಗುವ ಜೀವನ ನೀತಿಯನ್ನು ಸ್ಪಷ್ಟಪಡಿಸಿರಿ. **(Scores : 4)**

15. 'ಬೂತಯ್ಯನ ಮಗ ಅಯ್ಯು' ಎಂಬ ಸಣ್ಣಕಥೆಯು ನಿರ್ದೇಶಕನ ಜಾಣ್ಮೆಯಿಂದ ಹೇಗೆ ಉತ್ತಮ ಕಲಾಕೃತಿಯಾಗಿ ಬೆಳ್ಳಿ ತೆರೆಯ ಮೇಲೆ ಮೂಡಿ ಬಂತು ಎಂಬುವುದನ್ನು ಪಾಠಭಾಗದ ಹಿನ್ನೆಲೆಯಲ್ಲಿ ಸಮರ್ಥಿಸಿರಿ. **(Scores : 4)**

16. ಕನ್ನಡ ನಾಡಿನ ಪ್ರಾಕೃತಿಕ ವೈಭವವು 'ನಾಡಸಿರಿ' ಕಾವ್ಯಭಾಗದಲ್ಲಿ ಹೇಗೆ ವರ್ಣಿತವಾಗಿದೆ. ಸ್ಪಷ್ಟಪಡಿಸಿರಿ. **(Scores : 4)**

17. ಪ್ರಕೃತಿ ವಿಕೋಪದಿಂದ ಸಂತ್ರಸ್ತರಾದ ಕುಟುಂಬಗಳಿಗೆ ನೆರವನ್ನು ಒದಗಿಸುವಂತೆ ಕೋರಿ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಲು ಮನವಿಪತ್ರವೊಂದನ್ನು ಸಿದ್ಧಪಡಿಸಿರಿ. **(Scores : 4)**

18. 'ಮೇರಿಕ್ಯೂರಿ ಯ ಅವಿರತ ಪರಿಶ್ರಮ, ತಾಳ್ಮೆ, ಛಲಗಳು ರೇಡಿಯಂ ಸಂಶೋಧನೆಯ ಯಶಸ್ಸಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ' – ನೀವು ಓದಿದ ಪಾಠಭಾಗದ ಹಿನ್ನೆಲೆಯಲ್ಲಿ ಈ ಮಾತನ್ನು ಸಮರ್ಥಿಸಿರಿ. **(Scores : 4)**

**(19 ರಿಂದ 26 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಉತ್ತರಿಸಿರಿ)** **(6 × 5 = 30)**

19. ನಾಯಿಗಳಿಂದ ಹಂದಿಮರಿಯು ಉಪಾಯದಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವ ಬಗೆಯನ್ನು 'ಕೆರೆಯ ದಡದಲ್ಲಿ' ಪಾಠಭಾಗದ ಆಧಾರದಲ್ಲಿ ವಿವರಿಸಿರಿ. **(Scores : 5)**

20. ಆಧುನಿಕ ಉದ್ಯೋಗವಕಾಶಗಳಿಗೆ ಮಾರುಹೋಗುವ ಇಂದಿನ ಯುವ ಜನಾಂಗವು ತಂದೆ-ತಾಯಿಗಳಿಂದ ದೂರವಿದ್ದು ಬದುಕುತ್ತಾರೆ. ತಂದೆತಾಯಿಗಳು ಕೊನೆಗಾಲದಲ್ಲಿ ಮಕ್ಕಳ ಪ್ರೀತಿಯಿಂದ ವಂಚಿತರಾಗಿ ನೊಂದುಕೊಳ್ಳುವ ಚಿತ್ರಣ 'ಅವರವರ ದಾರಿ' ಕವನದಲ್ಲಿದೆ. ಈ ಕವನದ ಆಶಯವನ್ನು ನಿಮ್ಮ ಮಾತುಗಳಲ್ಲಿ ವಿಶದವಾಗಿ ಬರೆಯಿರಿ. **(Scores : 5)**

21. ಶಾಲಾ ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸಲು 'ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮಗಳು' ಎಂಬ ಶೀರ್ಷಿಕೆಯಲ್ಲಿ ಕಿರು ಲೇಖನವೊಂದನ್ನು ಸಿದ್ಧಪಡಿಸಿರಿ. **(Scores : 5)**

22. ಶೋಷಿತ ವರ್ಗದ ಪ್ರತಿಭಟನೆಯ ಸ್ವರೂಪ 'ಸಾವಿರಾರು ನದಿಗಳು' ಕವನದಲ್ಲಿ ಹೇಗೆ ಮೂಡಿ ಬಂದಿದೆ. ನಿಮ್ಮ ಮಾತುಗಳಲ್ಲಿ ಸ್ಪಷ್ಟಪಡಿಸಿರಿ. **(Scores : 5)**

23. ದುರ್ಜನರಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲ ಎಂಬುವುದನ್ನು ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ನಿರೂಪಿಸಿದ ಬಗೆಯನ್ನು ವಿವರಿಸಿರಿ. **(Scores : 5)**

24. ಒಂದು ಸಿನೆಮಾ ತಯಾರಿಯಲ್ಲಿ ನಿರ್ಮಾಪಕ ಮತ್ತು ನಿರ್ದೇಶಕರ ಪಾತ್ರವೇನೆಂಬುದನ್ನು ನೀವು ಓದಿದ ಪಾಠದ ಆಧಾರದಲ್ಲಿ ಸ್ಪಷ್ಟಪಡಿಸಿರಿ. **(Scores : 5)**

25. ಕೆಳಗಿನ ಪದ್ಯದ ಸಾಲಿಗೆ ಪ್ರಸ್ತಾರ ಹಾಕಿ, ಗಣ ವಿಭಜನೆ ಮಾಡಿ, ಛಂದಸ್ಸನ್ನು ಹೆಸರಿಸಿರಿ. **(Scores : 5)**
ಬಡವಂ ಬಲ್ಲಿದನಾಗನೇ ಹರಹರಾ ಶ್ರೀಚೆನ್ನ ಸೋಮೇಶ್ವರಾ

26. 'ಛಲದಂಕ ಮಲ್ಲ ದುರ್ಯೋಧನ' ಎಂಬ ಮಾತನ್ನು 'ಗುರುವಚನಮಲಂಘನೀಯಂ' ಎಂಬ ಕಾವ್ಯಭಾಗದ ಹಿನ್ನೆಲೆಯಲ್ಲಿ ಬರೆಯಿರಿ. **(Scores : 5)**

**(27 ರಿಂದ 29 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡನ್ನು ಒಂದೂವರೆ ಪುಟಕ್ಕೆ ಮೀರದಂತೆ ಉತ್ತರಿಸಿರಿ)** **(2 × 8 = 16)**

27. 'ತಾಯಿ' ಕಥೆಯಲ್ಲಿ ತನ್ನ ಮಗುವಿಗಾಗಿ ತುಡಿಯುವ ಮಾತೃ ಹೃದಯದ ವಾತ್ಸಲ್ಯವು ಅಬ್ಬಕ್ಕಳ ಪಾತ್ರದ ಮೂಲಕ ಹೇಗೆ ಮೂಡಿ ಬಂದಿದೆ ? ವಿವರಿಸಿರಿ. **(Scores : 8)**

28. ಎಲ್ಲವನ್ನೂ ತೊರೆದು ತೊರೆಯಪುರಕ್ಕೆ ಬಂದ ಸುಬ್ಬಣ್ಣನು ನಿಧಾನವಾಗಿ ಕುಟುಂಬ ಜೀವನಕ್ಕೆ ಮರಳಿದ ಬಗೆಯನ್ನು ಪಾಠದ ಆಧಾರದಲ್ಲಿ ವಿವರಿಸಿರಿ. **(Scores : 8)**

29. "ಚಲನಚಿತ್ರವು ಜನಜೀವನದ ಮೇಲೆ ಬಹುಬೇಗನೆ ಪ್ರಭಾವವನ್ನು ಬೀರುವ ಶಕ್ತಿಶಾಲಿ ಮಾಧ್ಯಮವಾಗಿದೆ." ಈ ಹೇಳಿಕೆಯನ್ನು ಸಮರ್ಥಿಸಿಕೊಂಡು ಲೇಖನವೊಂದನ್ನು ಸಿದ್ಧಪಡಿಸಿರಿ. **(Scores : 8)**

---